ಉಂಟಾಯಿತು. ಇಂಥ ರೈತರ ಮಕ್ಕಳೆಲ್ಲ ಓದಿ ಈಗ ಪೇಟೆ ಸೇರಿದ್ದಾರೆ ಇಲ್ಲವೇ ಪೇಟೆಗೆ ಹೋಗಲು ಅವಕಾಶ ಇಲ್ಲದವರು ರಿಕ್ಷಾ ಇಟ್ಟುಕೊಂಡು ಊರಲ್ಲೇ ದುಡಿಯುತ್ತಿದ್ದಾರೆ. ಹೊಲ, ಗದ್ದೆ, ಅಡಿಕೆ ತೋಟಗಳೂ ಅವರಿಗೆ ಬೇಕಾಗಿಲ್ಲ. ಕಾಂತಾವರದಲ್ಲೇ ಸುಮಾರು ನಲವತ್ತರಷ್ಟು ರಿಕ್ಷಾಗಳಿವೆ. ಅಂದರೆ, ಅವರೆಲ್ಲ ಕೃಷಿ ವಿಮುಖರು ಎಂದು ಅರ್ಥ. ಕೂಲಿಗಳ ಸಮಸ್ಯೆಯೂ ಇದರಿಂದ ದೊಡ್ಡದಾಗಿ ಬೆಳೆದಿದೆ.

ನಾನು ನನ್ನ ಬಾಲ್ಯದಲ್ಲಿ ನೋಡಿದ, ಆಮೇಲೆ ಕಾಂತಾವರದಲ್ಲಿ ಕಂಡುಂಡ ಕೃಷಿ ಸಂಸ್ಕೃತಿಯ ಪಲ್ಲಟಗಳನ್ನು ನನ್ನ 'ಪಲ್ಲಟ', 'ಉಲ್ಲಂಘನೆ', 'ಮುಖಾಂತರ' ಮೊದಲಾದವುಗಳಲ್ಲಿ ತೆರೆದಿಟ್ಟದ್ದೇನೆ. ನನಗೆ ಈ ವಿಚಾರದಲ್ಲಿ ದಟ್ಟ ಅನುಭವವಿರುವುದರಿಂದ ನಾನು ಗ್ರಾಮಭಾರತವನ್ನು ಸಹಜವಾಗಿ ಚಿತ್ರಿಸಬಲ್ಲೆ. ನಗರ ಭಾರತ ನನಗೆ ಕಷ್ಟವೇ. ಈಗ ಪ್ರಕಟಣೆಯ ಹಂತದಲ್ಲಿರುವ ನನ್ನ ಕಾದಂಬರಿ 'ಭಾರತ ಕಥಾ' ಇಡೀ ಒಂದು ಹಳ್ಳಿಯ ವಿಘಟನೆಯನ್ನು ಯಶಸ್ವಿಯಾಗಿ ತೆರೆದಿದೆ ಅನಿಸಿದೆ.

◆ **ಕಾಂತಾವರ ಕನ್ನಡ ಸಂಘ, ವರ್ಧಮಾನ ಪ್ರಶಸ್ತಿ ಪೀಠ ಮತ್ತು ಅಲ್ಲಮ ಪೀಠಗಳ ಮೂಲಕ ಹದಿನಾಲ್ಕರಷ್ಟು ಪ್ರಶಸ್ತಿಗಳನ್ನು ಸ್ಥಾಪಿಸುವ ಮೂಲಕ ಪ್ರತಿಭಾಶೋಧ ಮತ್ತು ಪ್ರೋತ್ಸಾಹದ ಕೆಲಸವನ್ನು ನಿರಂತರವಾಗಿ ನೀವು ಮಾಡುತ್ತಾ ಬಂದಿದ್ದೀರಿ. ಆದರೆ, ಪ್ರತಿಭಾಶಾಲಿ ಲೇಖಕರಾಗಿ ನಿಮಗೆ ಸಿಗಬೇಕಾದಷ್ಟು ವಿಮರ್ಶೆ ಮತ್ತು ಮನ್ನಣೆ ಸಿಕ್ಕಿವೆ ಎಂದು ನಿಮಗನ್ನಿಸಿದೆಯೇ?**

ಇದು ಸ್ವಲ್ಪ ಮುಜುಗರದ ವಿಷಯ. ತನ್ನ ಬಗ್ಗೆ ಯಾರಾದರೂ ಇಂಥ ವಿಚಾರದಲ್ಲಿ ಮಾತನಾಡುವುದು ವಾಸ್ತವಕ್ಕೆ ಹತ್ತಿರವಾಗಿ ಇರುತ್ತದೆ ಎನ್ನಲಾಗದು! ನನಗೆ ಮನ್ನಣೆ ಸಿಕ್ಕಿದೆಯೋ ಅಂದರೆ ಸಿಕ್ಕಿದೆ ಅನ್ನಬೇಕು! ಆದರೆ, ಮುಖ್ಯವಾದವು ಬಂದಿಲ್ಲ ಎಂದರೆ ಅದೂ 'ಹೌದು' ಅನ್ನಬೇಕು.

ನಾನು ಈಗ ನನ್ನಲ್ಲಿರುವ ಎಲ್ಲಾ ಪ್ರಶಸ್ತಿಗಳನ್ನು ಸ್ಥಾಪಿಸಲು ಒಂದು ಸಣ್ಣ ಹಿನ್ನೆಲೆ ಇದೆ. 1977ರಲ್ಲಿ ನನ್ನ 'ನನ್ನದಲ್ಲದ್ದು' ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡಮಿ ಬಹುಮಾನ ಬಂತು. ಆಗ 'ರಾ.ಶಿ' ಅದರ ಅಧ್ಯಕ್ಷರಿದ್ದರು. ವಿ.ಎಂ. ಇನಾಂದಾರರಂಥವರು ತೀರ್ಪುಗಾರರಾಗಿದ್ದರು. ಆ ಕಾದಂಬರಿ ಪ್ರಶಸ್ತಿ ಬಂದ ಮೇಲೆ 'ಕಸ್ತೂರಿ' ಮಾಸಿಕದಲ್ಲಿ ಪುಸ್ತಕ ವಿಭಾಗದಲ್ಲಿ ಸಂಕ್ಷಿಪ್ತವಾಗಿ ಬಂತು. 'ಮಲ್ಲಿಗೆ'ಯಲ್ಲಿ ಹತ್ತು ವರುಷದ ಅಂತರದಲ್ಲಿ ಎರಡು ಬಾರಿ ಅದರ ಸಂಕ್ಷಿಪ್ತರೂಪ ಪ್ರಕಟವಾಯಿತು. ಆದರೆ, ಆ ಕೃತಿಗೆ ಬಹುಮಾನ ಬಂದದ್ದಕ್ಕೆ ಯಾವ ದಾಖಲೆಯೂ ಇದ್ದಿಲ್ಲ. ಅಂದರೆ ಸಾಹಿತ್ಯ ಅಕಾಡೆಮಿಯು ಆಗ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಇಟ್ಟುಕೊಳ್ಳುತ್ತಿರಲಿಲ್ಲ. ಈ ನೋವಿನಿಂದ ನಾನು ಪ್ರಶಸ್ತಿಯ ಹಣದ ಜೊತೆ ಪ್ರಶಸ್ತಿ ಪ್ರದಾನವೂ ಇರಬೇಕು ಎಂದುಕೊಂಡು 1979ರಲ್ಲಿ ಕನ್ನಡ ಸಂಘದಿಂದ ಮುದ್ದಣ ಕಾವ್ಯ ಪ್ರಶಸ್ತಿಯನ್ನು ಮತ್ತು ವರ್ಧಮಾನ ಪ್ರಶಸ್ತಿ ಪೀಠದಿಂದ ಹಿರಿ-ಕಿರಿಯರಿಗೆ ಪ್ರತ್ಯೇಕವಾಗಿ ಎರಡು ವರ್ಧಮಾನ ಪ್ರಶಸ್ತಿಗಳನ್ನು ಸ್ಥಾಪಿಸಿದೆ. ಇನ್ನು ಇತ್ತೀಚೆಗಿನ ಪ್ರಶಸ್ತಿಗಳ ರಾಜಕೀಯ ನಿಮಗೂ ಗೊತ್ತು. ನನಗೂ ಗೊತ್ತು. ಆ ಬಗ್ಗೆ ಚರ್ಚೆ ಬೇಡ. ಮಾಸ್ತಿಯವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ, ಯಾರೋ 'ನಿಮಗೆ ತಡವಾಗಿ ಬಂತಲ್ಲ?' ಎಂದು ಪ್ರಶ್ನಿಸಿದರಂತೆ. ಆಗ ಮಾಸ್ತಿಯವರು 'ನಾನು ಹಿರಿಯ ಎಂದು ತಡವಾಗಿ ಬಂತು. ಮನೆಯಲ್ಲಿ ಸಿಹಿ ಹಂಚುವುದು ಮೊದಲು ಮಕ್ಕಳಿಗೆ ತಾನೇ?' ಎಂದರಂತೆ. ನಮ್ಮ ಪ್ರಸಿದ್ಧ ವಿಮರ್ಶಕರಾದ ಪ್ರೊ. ಜಿ.ಎಚ್. ನಾಯಕರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ, ಅವರು 'ತಡವಾಗಿಯಾದರೂ ಬಂತಲ್ಲ!' ಎಂದು ಉದ್ಗರಿಸಿದರಂತೆ. ನಾನು ಈ ಎರಡರ ನಡುವೆ ಇದ್ದೇನೆ!

◆ **ವಿವಿಧ ಪ್ರಶಸ್ತಿಗಳು ಮತ್ತು 'ನಾಡಿಗೆ ನಮಸ್ಕಾರ' ಗ್ರಂಥಮಾಲೆಯ ಮೂಲಕ 331 ಪುಸ್ತಕಗಳನ್ನು ನೀವು ಪ್ರಕಟಿಸಿ ಕಾಂತಾವರವನ್ನು ಕನ್ನಡದ ಸಾಂಸ್ಕೃತಿಕ ನಕ್ಷೆಯಲ್ಲಿ ಸ್ಥಿರಗೊಳಿಸಿದ್ದೀರಿ. ನಿಮ್ಮ ಬರಹಗಳಲ್ಲಿ ಬರುವ 'ಸೀತಾಪುರ'ವೆಂಬ ಕಾಲ್ಪನಿಕ ಗ್ರಾಮದ ಮೂಲಕವೂ ಕಾಂತಾವರದ ಒಳ-ಹೊರ ಸ್ವರೂಪವನ್ನು ಸಾದ್ಯಂತವಾಗಿ ದಾಖಲಿಸಿದ್ದೀರಿ. ಕಾಂತಾವರವು ಸೀತಾಪುರವಾದದ್ದು ಹೇಗೆ? ಏಕೆ?**

ಒಬ್ಬ ಕಾದಂಬರಿಕಾರ ತನ್ನ ಅನುಭವವನ್ನು ಪುನರ್